ಜರ್ಮನಿಯ ಹಳ್ಳಿಯೊಂದರಲ್ಲಿ ಈ ಕ್ಷಣಕ್ಕೂ ನಡೆಯುತ್ತಿದೆ. ಇಲ್ಲಿನ ಜನ ಈ ಹಕ್ಕಿಗಳ ವಾಸಕ್ಕಾಗಿಯೇ ಎತ್ತರದ ಗೋಪುರ ಕಟ್ಟಿ ಅಲ್ಲಿ ಹಕ್ಕಿಮನೆಗಳನ್ನು ನಿರ್ಮಿಸುತ್ತಿದ್ದಾರೆ. ತಾವೇ ಗೂಡನ್ನು ಕಟ್ಟಿ ಹಕ್ಕಿಗಳ ಆಹ್ವಾನಿಸುತ್ತಿದ್ದಾರೆ. ಹಳ್ಳಿ ಸುತ್ತಮುತ್ತ ಹಕ್ಕಿಗೆ ಗೂಡು ಕಟ್ಟಲು ಬೇಕಾದ ಕಟ್ಟಿಗೆಯ ಸಾಮಾಗ್ರಿಗಳನ್ನು ಅಲ್ಲಲ್ಲಿ ಸುರಿಯುತ್ತಿದ್ದಾರೆ. ಪ್ರತಿ ವರ್ಷ ಹಕ್ಕಿಗಳು ಇಲ್ಲಿಗೆ ಬಂದು ಸುಲಭವಾಗಿ ದಕ್ಕುವ ಗೂಡುಗಳನ್ನು ತಮಗೆ ಬೇಕಾದಂತೆ ಪುನರ್ ನಿರ್ಮಿಸಿಕೊಂಡು; ಸಂತಾನ ಬೆಳೆಸಿಕೊಂಡು ವಾಪಸ್ ಹೋಗುತ್ತಿವೆ. ಇಂತಹ ಅಪೂರ್ವ ಗಳಿಗೆಗಳನ್ನು ಹುಟ್ಟು ಹಾಕಿಕೊಂಡ ಇಲ್ಲಿನ ಜನ ಇದನ್ನೆಲ್ಲಾ ನೋಡಿ ಸಂಭ್ರಮವನ್ನು ಪಡುತ್ತಿದ್ಧಾರೆ. ಈ ಪಾಟ ಖ್ಯಾತಿ ಗಳಿಸಿರುವ ಈ ಕೆಂದುಟಿಯ ಹಕ್ಕಿ ಬಿಗ್ವಾನ್ ಹಿನ್ನೀರಿಗೆ ಊಟ ಹುಡುಕಿಕೊಂಡು ಸಾವಿರಾರು ಮೈಲಿ ಪಯಣ ಮಾಡಿಕೊಂಡು ಬರುತ್ತದೆ. ಖಗ ತೋರುಗ ಹೇಳಿದಂತೆ ನಮ್ಮ ಪಾಲಿಗಿದು ವಿಶೇಷವೇ ಹೌದಾಗಿತ್ತು.



ಬಿಗ್ವಾನ್‌ನ ಉಜ್ಜನಿ ಅಣೆಕಟ್ಟಿನಲ್ಲಿ ಸಾವಿರಾರು ಸಂಖ್ಯೆಯಲ್ಲಿ ನಾನಾ ಪ್ರಜಾತಿಯ ಬಾತುಕೋಳಿಗಳು, ಹೆರಾನ್‌ಗಳು ಮತ್ತು ಬೆಳ್ಳಕ್ಕಿಗಳು ಠಳಾಯಿಸುತ್ತವೆ. ಈ ಹಕ್ಕಿಗಳನ್ನು ಬಡಿದು ಮುಕ್ಕಲು ಹೊಂಚುಹಾಕಿ ಹಲವು ಹದ್ದುಗಳು ಸದಾ ಸಕ್ರಿಯವಾಗಿರುತ್ತವೆ. ಇಲ್ಲಿ ನಡೆಯುವ ಸಾವು-ಬದುಕಿನ ಹೋರಾಟವೇ ಬಲು ಸೋಜಿಗದ್ದು. ಯಾವ ಪಕ್ಷಿಗೂ ಯಾವುದೇ ಸಂದರ್ಭದಲ್ಲೂ ಅಪಾಯ ಕಟ್ಟಿಟ್ಟ ಬುತ್ತಿ. ಎಲ್ಲವೂ ಜೀವಭಯದಲ್ಲೇ ಬಾಳಿ ಬದುಕುತ್ತವೆ. ಪ್ರಾಣ ಉಳಿಸಿಕೊಂಡವರಷ್ಟೇ ಈ ಪ್ರಕೃತಿಯಲ್ಲಿ ಸಬಲರು.

ಬಣ್ಣದ ಕೊಕ್ಕರೆಗಳು, ಬಾರ್-ಹೆಡೆಡ್ ಹೆಬ್ಬಾತುಗಳು ಮತ್ತು ಡೆಮೊಯಿಸೆಲ್ ಕ್ರೇನ್‌ಗಳು ಸೇರಿದಂತೆ ಇನ್ನೂರೈವತ್ತಕ್ಕೂ ಹೆಚ್ಚು ಜಾತಿಯ ವಲಸೆ ಹಕ್ಕಿಗಳು ವಿದೇಶದಿಂದ ಇಲ್ಲಿಗೆ ಬಂದಿಳಿಯುತ್ತವೆ. ಈ ವಲಸೆ ಜೀವಿಗಳು ಡಿಸೆಂಬರ್ ಮತ್ತು ಮಾರ್ಚ್ ನಡುವಿನ ಚಳಿಗಾಲದಲ್ಲಿ ಇಲ್ಲಿ ಕಾಣುತ್ತವೆ. ವಲಸೆ ಖಗಗಳಿಗೆ ಸಂಕೋಚ ಮತ್ತು ಅಂಜಿಕೆ ಹೆಚ್ಚು. ಸ್ಥಳೀಯ ಹಕ್ಕಿಗಳ ಎದುರು ಇವು ಹೆದರುತ್ತಲೇ ಕಾಲ ಹಾಕುತ್ತವೆ. ತಮ್ಮನ್ನು ಹಿಡಿದು ತಿನ್ನಲು ಹವಣಿಸುವ ಪ್ರಾಣಿ, ಪಕ್ಷಿ ಮತ್ತು ಮನುಷ್ಯರ ಬಗ್ಗೆ ಇವಕ್ಕೆ ಪಕ್ಕಾ ಎಚ್ಚರಿಕೆಯಿದೆ. ಹೀಗಾಗಿ ಸಣ್ಣ ಶಬ್ದಕ್ಕೂ, ಸೂಕ್ಷ್ಮ ವ್ಯತ್ಯಾಸಕ್ಕೂ ಗಾಬರಿ ಸೂಚಿಸುತ್ತವೆ. ಅಪರಿಚಿತ ಜಾಗದಲ್ಲಿ ತಮ್ಮದಲ್ಲದ ನೆಲದಲ್ಲಿ ಬದುಕುವಾಗ ಪ್ರತಿ ಜೀವಿಯೂ ಆತಂಕದಲ್ಲಿರುತ್ತದೆ. ಜೀವ ದಾಳಿ ಯಾವಾಗ, ಯಾರಿಂದ ಮತ್ತು ಹೇಗೆ ನಡೆಯುತ್ತದೆಯೋ? ಎಂಬ ಹೆದರಿಕೆ ಸದಾ ಇದ್ದದ್ದೇನೆ. ಹೀಗೆ ಒಳ ಭಯ ತುಂಬಿಕೊಂಡ ಜೀವಿಗಳು ಭದ್ರತೆಯ ಕಾರಣಕ್ಕೆ ಸದಾ ಗುಂಪಾಗಿ ಇರುತ್ತವೆ. ಅನಿರೀಕ್ಷಿತ ಆಪತ್ತು, ಕೆಟ್ಟ ಪರಿಸ್ಥಿತಿ ಉದ್ಭವಿಸಿದರೆ ಒಟ್ಟಾಗಿದ್ದರೆ ಎದುರಿಸಬಹುದು ಎಂಬ ನಂಬಿಕೆ.

ಉಜ್ಜನಿ ಅಣೆಕಟ್ಟಿನ ಹಿನ್ನೀರಿನಲ್ಲಿ ನಾವು ಸುಂದರ ಬಣ್ಣದ ಗ್ರೇಟರ್ ಫ್ಲೆಮಿಂಗೊ ಜೊತೆಗೆ ಯುರೇಷಿಯನ್ ಸ್ಪೂನ್‌ಬಿಲ್ ನೋಡಿದೆವು. ಚಮಚದ ಕೊಕ್ಕಿನ ಈ ಹಕ್ಕಿಯ ಕುತ್ತಿಗೆ ಕೆಳಗೆ ಹಳದಿ ಮತ್ತು ಕೆಂಪು ಬಣ್ಣದ ಸುಂದರ ಪಟ್ಟೆಗಳು ಮೊಟ್ಟೆ ಇಡುವ ಕಾಲದಲ್ಲಿ ಮೂಡುತ್ತವೆ. ಸಾಂಬಾರಿನಲ್ಲಿ ಸವುಟು ಅಲ್ಲಾಡಿಸುವಂತೆ ಈ ಹಕ್ಕಿ ತನ್ನ ಸಟ್ಟುಗದಂಥ ಕೊಕ್ಕನ್ನು ನೀರಿನಲ್ಲಿ